# ಗಣೇಶ್ ಯುಗಳ

ಗಣೇಶ್ ಅವರ ಹುಟ್ಟುಹಬ್ಬಕ್ಕೆ (ಜುಲೈ 2) ಮುಂಗಡ ಉಡುಗೊರೆ ಎನ್ನುವಂತೆ ಎರಡು ಚಿತ್ರಗಳ ಪ್ರಕಟಣೆ ಒಂದರ ಹಿಂದೊಂದು ಹೊರಬಿದ್ದಿದೆ. ಒಂದು ಚಿತ್ರವನ್ನು ನಾಗಣ್ಣ ನಿರ್ದೇಶಿಸುತ್ತಿದ್ದರೆ, ಇನ್ನೊಂದು ಚಿತ್ರದ ನಿರ್ದೇಶನ ವಿಜಯ್ ನಾಗೇಂದ್ರ ಅವರದು.

ವಿಜಯ್ ನಾಗೇಂದ್ರ ನಿರ್ದೇಶನದ ಸಿನಿಮಾದ ಹೆಸರು 'ಗೀತಾ'. ಸಂತೋಷ್ ಆನಂದರಾಮ್ ಜೊತೆ ಕೆಲಸ ಮಾಡಿರುವ ಅನುಭವ ಹೊಂದಿರುವ ವಿಜಯ್ 'ಗೀತಾ' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಸೆಪ್ಟೆಂಬರ್‌ನಲ್ಲಿ ಚಿತ್ರೀಕರಣ ಆರಂಭವಾಗಲಿರುವ ಈ ಸಿನಿಮಾದ ತಾರಾಗಣ ಇನ್ನೂ ಅಂತಿಮವಾಗಿಲ್ಲ. ಹರಿಕೃಷ್ಣ ಸಂಗೀತ ಹಾಗೂ ಶ್ರೀಶ ಕುದುವಳ್ಳಿ ಛಾಯಾಗ್ರಹಣ ಚಿತ್ರಕ್ಕಿದೆ.

ನಾಗಣ್ಣ ನಿರ್ದೇಶನದ ಸಿನಿಮಾದ ಮುಹೂರ್ತ ಕಳೆದ ವಾರ ನಡೆದಿದೆ. ಹಾಸ್ಯ ಮತ್ತು ಹಾರರ್ ಸಮೀಕರಣದ ಈ ಸಿನಿಮಾ ಗಣೇಶ್ ಜೊತೆಗೆ ನಾಗಣ್ಣನವರಿಗೂ ಭಿನ್ನ ರೀತಿಯ ಸಿನಿಮಾ ಆಗಲಿದೆ. ವಿಘ್ನೇಶ್ ಛಾಯಾಗ್ರಹಣ ಹಾಗೂ ಅರ್ಜುನ್ ಜನ್ಯಾ ಸಂಗೀತ ಚಿತ್ರಕ್ಕಿದೆ. ಪಂಜಾಬ್ ತರುಣಿ ರೋನಿಕಾ ಸಿಂಗ್ ಚಿತ್ರದ ನಾಯಕಿ. ಸುಂದರ್‌ರಾಜ್, ಶೋಭರಾಜ್, ಚಿ. ಗುರುದತ್, ರವಿಶಂಕರ್‌ಗೌಡ ಹಾಗೂ ಸಾಧುಕೋಕಿಲ ತಾರಾಗಣದಲ್ಲಿರುವ ಪ್ರಮುಖರು.





# ಪ್ರೇಮ ಹಾಗೂ ದರೋಡೆ

'ರಾಧಾ ರಮಣ' ಧಾರಾವಾಹಿ ಖ್ಯಾತಿಯ ಶ್ವೇತಾ ಪ್ರಸಾದ್ ನಾಯಕಿಯಾಗಿ ನಟಿಸಿರುವ 'ಕಳ್ಬೆಟ್ಟದ ದರೋಡೆಕೋರರು' ಸಿನಿಮಾ ಹೆಚ್ಚು ಸುದ್ದಿಯಾಗದೆ ತೆರೆಗೆ ಬರಲು ಸಿದ್ಧತೆ ನಡೆಸುತ್ತಿದೆ. ದೀಪಕ್ ಮಧುವನಹಳ್ಳಿ ಚಿತ್ರದ ನಿರ್ದೇಶಕರು.

ಶ್ವೇತಾ ಅವರಿಗಿದು ಚೊಚ್ಚಲ ಸಿನಿಮಾ. 'ರಾಮ ರಾಮ ರೇ' ಚಿತ್ರದ ಮೂಲಕ ಸಹೃದಯರ ಗಮನಸೆಳೆದಿದ್ದ ನಟರಾಜ್, ಶ್ವೇತಾ ಅವರಿಗೆ ಜೋಡಿಯಾಗಿ ನಟಿಸಿದ್ದಾರೆ. 'ರಾಮ ರಾಮ ರೇ' ಚಿತ್ರದಲ್ಲಿ ನಟರಾಜ್‌ರ ನಟನೆಯನ್ನು ಮೆಚ್ಚಿದ್ದ ಶ್ವೇತಾ ಅವರಿಗೆ ಈಗ ತಮ್ಮ ನೆಚ್ಚಿನ ನಟನೊಂದಿಗೆ ನಟಿಸಿದ ಪುಳಕ. ನಟರಾಜ್ ಈ ಸಿನಿಮಾದಲ್ಲಿ ಪ್ರೇಕ್ಷಕರನ್ನು ಅಚ್ಚರಿಗೊಳಿಸುವ ರೀತಿಯಲ್ಲಿ ಕಾಣಿಸಿಕೊಂಡಿದ್ದಾರಂತೆ.

'ಕಳ್ಬೆಟ್ಟದ ದರೋಡೆಕೋರರು' ಅನುಷ್ ಎ. ಶೆಟ್ಟಿ ಅವರ ಕಾದಂಬರಿ ಆಧರಿಸಿದ ಸಿನಿಮಾ. ಹಳ್ಳಿಯಲ್ಲಿನ ಹುಡುಗರ ಜಗಳ ಹಾಗೂ ಆ ಜಗಳಗಳ ನಡುವೆಯೇ ಅರಳುವ ಪ್ರೇಮದ ಕಥೆ ಚಿತ್ರದಲ್ಲಿದೆ. ಊರಿಗೆ ಹೊಂದಿಕೊಂಡಂತೆ ಇರುವ ಬೆಟ್ಟ ಹಾಗೂ ದರೋಡೆಕೋರರ ಎಳೆಯೂ ಕಥೆಯೊಂದಿಗೆ ಸೇರಿಕೊಂಡಿದೆ. ಗ್ರಾಮೀಣ ಸೊಗಡು ಚಿತ್ರದಲ್ಲಿ ಹಾಸುಹೊಕ್ಕಾಗಿದೆ ಎನ್ನುವುದು ನಿರ್ದೇಶಕರ ಅನಿಸಿಕೆ.

ಹೇಮಂತ್ ಸುಶೀಲ್, ದಂಡಪ್ಪ ಮೂಡಲಗಿ, ಶೃಂಗೇರಿ ರಾಮಣ್ಣ, ಸಿದ್ಧರಾಜ ಕಲ್ಯಾಣಕರ್, ರಾಧಿಕಾ ಭಾರದ್ವಾಜ್ ತಾರಾಗಣದಲ್ಲಿರುವ ಕೆಲವರು. ಚಿತ್ರದ ಸಂಗೀತ ಅನೂಪ್ ಸೀಳಿನ್. ಮೂವರು ಛಾಯಾಗ್ರಾಹಕರು (ಕಿರಣ್ ಹಂಪಾಪುರ, ಲವಿತ್ ಹಾಗೂ ಪ್ರದೀಪ್ ಪದ್ಮಕುಮಾರ್) ದುಡಿದಿರುವುದು ಸಿನಿಮಾದ ಇನ್ನೊಂದು ವಿಶೇಷ.

■ ರಘು